ಕಾಸೀಂ ನಮ್ಮೂರಿನಲ್ಲಿ ಕಲಾಯಿಯ ಅಂಗಡಿಯಿಟ್ಟಿದ್ದ. ಅಂಗಡಿಯೆಂದರೆ ಅದೊಂದು ಚಿಕ್ಕ ಗೂಡು. ಅದೇ ಮನೆ, ಅದೇ ಅಂಗಡಿ. ಅದೇ ಅವನ ಎಲ್ಲವೂ ಆಗಿತ್ತು.ಅವನಿಗೆ ಅಂತ ಯಾರೂ ಇರಲಿಲ್ಲ. ಅವನು ಯಾರೊಂದಿಗೂ ಬೆರೆಯುತ್ತಲೂ ಇರಲಿಲ್ಲ. ಯಾರಾದರೂ ಏನಾದರೂ ಕೇಳಿದರೆ 'ನೀವೆಲ್ಲ ನಮ್ಮೋರಲ್ವೇ?' ಅನ್ನುತ್ತಿದ್ದ. ಆದರೆ ಹಾಗೆ ಕೇಳುವವರೂ ಊರಲ್ಲಿ ಕಡಿಮೆಯೇ.. ಒಂದು ಕಾಲದಲ್ಲಿ ಅವನು ಜೈಲಿಗೂ ಹೋಗಿ ಬಂದಿದ್ದ. ಅವನ ಚಂದದ ಹೆಂಡತಿ ಸಕೀನಾ ಬೆಂಕಿಗೆ ಸಿಕ್ಕಿ ಸತ್ತು ಹೋದಾಗ ಸಂದೇಹದ ಮೇಲೆ ಇವನನ್ನು ಜೈಲಿಗೆ ತಳ್ಳಲಾಗಿತ್ತು. ಅವನೇ ಬೆಂಕಿ ಹಚ್ಚಿದನೋ, ಇಲ್ಲ ಆಕಸ್ಮಿಕವೋ ಅಂತೂ ಜೈಲಿಗೆ ಹೋಗಿ ಬಂದ ಕಾಸೀಮನ ಮೇಲೆ ಊರೊಳಗೆ ಒಂದು ತಣ್ಣನೆ ಭಯವಿತ್ತು. ಅವನು ಅತ್ತ ಜೈಲಿಗೆ ಹೋದರೆ ಇತ್ತ ಅವನ ಅಪ್ಪ,ಅಮ್ಮ ಅಣ್ಣ ಎಲ್ಲರೂ ಊರು ಬಿಟ್ಟು ಎತ್ತಲೋ ಹೊರಟು ಹೋಗಿದ್ದರು. ಜೈಲಿಂದ ಮರಳಿದ ಮೇಲೆ ಅವನೊಬ್ಬನೇ ಆಗಿದ್ದ. ಅವನಷ್ಟಕ್ಕೆ ಅವನು ಇರುತ್ತಿದ್ದ. ಅಷ್ಟಾದರೂ ಅವನ ಬಗೆ ಊರಿನಲ್ಲಿ ನಾನಾ ಊಹಾಪೋಹಗಳಿದ್ದವು.

'ಏ ಈ ಇವಳಿಗೆ ಏನಾಗಿದೆ? ಎಲ್ಲ ಬಿಟ್ಟು ಆ ಕೊಲೆಗಾರನನನ್ನ...' ಅಮ್ಮ ಆದಷ್ಟು ಮೆತ್ತಗೆ ಹಲ್ಲು ಕಚ್ಚುತ್ತ ಹೇಳಿದಳು.

'ಇಲ್ಲಮ್ಮ,ಈ ಊರ ಗಂಡಸರಲ್ಲಿ ಎಷ್ಟು ಜನ ಹೀಗೆ ಇವಳನ್ನ ಮದ್ವೆಯಾಗೋದ್ರ ಬಗೆ ಯೋಚಿಸಿರ್ಬಹುದು?ಯಾರೂ ಇರ್ಲಿಕ್ಕಿಲ್ಲ, ಸಿಕ್ಕುವುದಾದರೆ ಚಂದ್ರಾ ಸುಮ್ಮನೆ ಸಿಕ್ಕಿದರೆ ಸರಿ ಅಷ್ಟೇ, ಅದು ಬಿಟ್ಟು ಅವಳನ್ನ ಮದುವೆಯಾಗೋವಂಥ ಮನಸ್ಯಾರು ಮಾಡ್ತಾರೆ? ಇವರಿಗೆಲ್ಲ ಹೋಲಿಸಿದರೆ ಕಾಸಿಂ ಸಾಬಿ ಎಷ್ಟೋ ಒಳ್ಳೆಯವರು' ವಾರಿಜಳ ಮಾತು ನನ್ನನ್ನು ಸವರಿಕೊಂಡೇ ಮುಂದೆಹೋಯ್ತು. ನಾನು ಕಸಿವಿಸಿಗೊಂಡು ಅಲ್ಲಿ ನಿಲ್ಲದೆ ಕೋಣೆ ಸೇರಿದೆ.

ವಾರಿಜಳ ಮಾತು ಮತ್ತೆ ಮತ್ತೆ ಕಿವಿಯಲ್ಲಿ ಅನುರಣಿಸಿದವು... 'ಇವರಿಗಿಂತ ಕಾಸಿಮ ಎಷ್ಟೋ ವಾಸಿ...'

ಅವತ್ತಿಡೀ ಅಮ್ಮನೂ ಸೇರಿದಂತೆ ಊರಿಗೂರೇ ಚಂದ್ರಾಳನ್ನು ಬಾಯಿಗಿಟ್ಟು ಜಗಿಯಿತು.

ನಾನು ಯಥಾಪ್ರಕಾರ ಮಧ್ಯಾಹ್ನದ ಬಿಸಿಲು ತಣಿವವರೆಗೆ ಮಲಗಿದೆ. ಮನಸು ಕುದಿಯುತ್ತಿತ್ತು. ಸಂಜೆಯ ಹೊಂಬಿಸಿಲು ಅಂಗಳದಲ್ಲಿ ಚೆಲ್ಲಾಡುವ ಹೊತ್ತಿಗೆಲ್ಲ ನನ್ನೊಳಗೆ ಅಪೂರ್ವ ಶಾಂತಿಯೊಂದು ಅರಳತೊಡಗಿತ್ತು. ಎಂದಿನಂತೇ ಕೋಣೆಗೆ ಕಾಫಿ ತಂದು 'ರವೀ' ಅಂದ ವಾರಿಯೆದುರು ಎಲ್ಲ ಅಹಂಬಿಟ್ಟು 'ವಾರೀ, ನನ್ನನ್ನು ಮದುವೆಯಾಗ್ತೀಯ' ಎಂದು ನಿಂತಾಗ ಮನಸು ಗಾಳಿಯಲ್ಲಿ ಹಾರುತ್ತಿತ್ತು.


## ಶಾಂತಿ ಕೆ.ಎ.

ಕೊಡಗಿನವರಾದ ಶಾಂತಿ ಕೆ. ಅಪ್ಪಣ್ಣ ಪ್ರಸ್ತುತ ರೈಲ್ವೆ ಇಲಾಖೆಯಲ್ಲಿ ಚೆನ್ನೈಯಲ್ಲಿ ಶುಶ್ರೂಷಕಿಯಾಗಿ ಕೆಲಸ ಮಾಡುತ್ತಿದ್ದಾರೆ. ವಿದ್ಯಾಭ್ಯಾಸ– ಪಿಯೂಸಿ ಬಳಿಕ ಡಿಪ್ಲೋಮಾ ಇನ್ ನರ್ಸಿಂಗ್. ಕತೆ, ಕವಿತೆಗಳನ್ನು ಬರೆದಿರುವ ಅವರು ತಮ್ಮ ಬರಹಗಳನ್ನು ಆಗಾಗ ಪತ್ರಿಕೆಗಳಲ್ಲಿ ಪ್ರಕಟಿಸುತ್ತ ಬಂದಿದ್ದಾರೆ. 2015ರ 'ಪ್ರಜಾವಾಣಿ' ದೀಪಾವಳಿ ಕಥಾ ಸ್ಪರ್ಧೆಯಲ್ಲಿ ಇವರ ಕತೆಗೆ ಮೊದಲ ಬಹುಮಾನ ಬಂದಿದೆ.